ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ:65/2016

ಚಾಸಾ: 5 ಫ್ರಾಸಾ:4

ದಿನಾಂಕ: 21.10.2023

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಪೂರ್ಣಿಮಾ |
| ಗಂಡನ ಹೆಸರು | : | ಕೃಷ್ಣ ಮೂರ್ತಿ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಗಂಗೊಳ್ಳಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಚಾಸಾ-1 ನನ್ನ ಅಕ್ಕ. ಚಾಸಾ-2 ನನ್ನ ತಾಯಿ. ಚಾಸಾ-3 ನನ್ನ ತಂದೆ. ಚಾಸಾ-4 ನನ್ನ ಅಣ್ಣ. ಚಾಸಾ-6 ನನ್ನ ಅಕ್ಕ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಅಕ್ಕನ ಅತ್ತಿಗೆ.

ಸುಮಾರು 8 ವರ್ಷಗಳ ಹಿಂದೆ ಚಾಸಾ-1 ರವರನ್ನು ಆರೋಪಿಯು ರಾತ್ರಿ ಹೊರಗೆ ಹಾಕಿದ್ದರು. ನಿಶ್ಚಿತಾರ್ಥದ ಸಮಯದಲ್ಲಿ ಆರೋಪಿಗೆ ನನ್ನ ಅಣ್ಣ 1,30,000/- ಹಣವನ್ನು ಮತ್ತು 8 ಪವನ್ ಚಿನ್ನವನ್ನು ವರದಕ್ಷಿಣೆಯಾಗಿ ಕೊಟ್ಟಿದ್ದರು. ಹಣದ ಪೈಕಿ 40,000/- ಹಣವನ್ನು ನನ್ನ ಅಣ್ಣ ಚೆಕ್ ಮೂಲಕ ಕೊಟ್ಟಿರುತ್ತಾರೆ. ನಂತರ ನನ್ನ ಅಣ್ಣ ಹೆಚ್ಚಿನ ವರದಕ್ಷಿಣೆ ಕೊಡಲು ಆಗುವುದಿಲ್ಲ ಎಂದು ಹೇಳಿರುತ್ತಾರೆ. ಚಾಸಾ-1 ರವರಿಗೆ ಹೆಣ್ಣು ಮಗು ಆದ ನಂತರ ಆರೋಪಿಯು ವರದಕ್ಷಿಣೆ ಹಣ ಕಡಿಮೆಯಾಯಿತು, ಮತ್ತೇ 2 ಲಕ್ಷ ರೂಪಾಯಿ ಹಣ ತರುವಂತೆ ಆರೋಪಿಯು ಚಾಸಾ-1 ರವರಿಗೆ ಹಿಂಸೆ ಕೊಡುತ್ತಿದ್ದರು.

ಆರೋಪಿಯು ಚಾಸಾ-1 ರವರನ್ನು ಅವರ ಗಂಡ ಇದ್ದ ಬಾಂಬೆಗೆ ಹೋಗಲು ಬಿಡುತ್ತಿರಲಿಲ್ಲ. ನಂತರ ನಾವು ಚಾಸಾ-1 ರವರನ್ನು ಬಾಂಬೆಗೆ ಕಳುಹಿಸಿಕೊಟ್ಟಿರುತ್ತೇವೆ. ಚಾಸಾ-1 ರವರು 2 ತಿಂಗಳು ಬಾಂಬೆಯಲ್ಲಿ ಇದ್ದರು, ನಂತರ ಅವರನ್ನು ವಾಪಸ್ಸು

ಕಳುಹಿಸಿದ್ದರು, ನಂತರ ಚಾಸಾ-1 ರವರು ಆರೋಪಿಯ ಮನೆಯಲ್ಲಿ ಸ್ವಲ್ಪ ದಿನ ಇದ್ದರು. ಪಂಚಾಯಿತಿಗೆ ಹೋದಾಗ ನನ್ನ ಕುಟುಂಬದವರ ಎದುರು ಚಾಸಾ-1 ರವರಿಗೆ ಆರೋಪಿಯು ಹೊಡೆದಿರುತ್ತಾರೆ. ನಂತರ ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 24-02-2012 ರಂದು ತ್ರಾಸಿ ಅಣ್ಣಪ್ಪಯ್ಯ ಸಭಾ ಭವನದಲ್ಲಿ 1 ನೇ ಆರೋಪಿಯ ವಿವಾಹ ಚಾಸಾ-1 ರವರೊಂದಿಗೆ ಆಗಿರುತ್ತದೆ ಎಂದರೆ ಸರಿ. ಮದುವೆಗಿಂತ 2 ತಿಂಗಳ ಮೊದಲು ನಮ್ಮ ಮನೆಯಲ್ಲಿ ನಿಶ್ಚಿತಾರ್ಥ ಆಗಿದ್ದು, ನಿಶ್ಚಿತಾರ್ಥದ ಸಮಯದಲ್ಲಿ ಆರೋಪಿಗಳು ವರದಕ್ಷಿಣೆ ಕೇಳಿದ್ದು ನಾವು ಕೊಡುವುದಿಲ್ಲ ಎಂದು ತಿಳಿಸಿದಾಗ 1 ನೇ ಆರೋಪಿ ಮದುವೆಯಾಗಲು ನಿರಾಕರಿಸಿರುತ್ತಾರೆ ಎಂದರೆ ಸರಿ. ನಾವು ಮದುವೆ ನಿಲ್ಲ ಬಾರದೆಂದು 1,30,000/- ಹಣ ಮತ್ತು 8 ಪವನ್ ಚಿನ್ನವನ್ನು ಕೊಡಲು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿ.

ಮದುವೆಯ 15 ದಿನದ ಮೊದಲು ಆರೋಪಿತರು ವರದಕ್ಷಿಣೆ ಹಣ ಕೇಳಲು ನಮ್ಮ ಮನೆಗೆ ಬಂದಿದ್ದು, ನನ್ನ ಅಣ್ಣ ಚಾಸಾ-4 ರವರು 45,000/- ಹಣವನ್ನು ನಗದಾಗಿ 1 ನೇ ಆರೋಪಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ದಿಃ 22-02-2012 ರಂದು ಆರೋಪಿತರು ಉಳಿದ ಹಣ ಕೇಳಲು ಬಂದಿದ್ದು, ಚೆಕ್ ಮುಖಾಂತರ ಚಾಸಾ-4 ರವರು 50 ಸಾವಿರ ಮತ್ತು 30 ಸಾವಿರದ 2 ಚೆಕ್ಕುಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಮದುವೆಯ ದಿನ ಚಾಸಾ-1 ರವರಿಗೆ 8 ಪವನ್ ಚಿನ್ನವನ್ನು ಹಾಕಿರುತ್ತೇವೆ ಎಂದರೆ ಸರಿ. ವರದಕ್ಷಿಣೆ ಹಣವನ್ನು 1 ನೇ ಆರೋಪಿ ತನ್ನ ಸ್ವಂತ ದುಂದು ವೆಚ್ಚಕ್ಕೆ ಬಳಸಿಕೊಂಡಿರುತ್ತಾರೆ ಎಂದರೆ ಸರಿ.

ಮದುವೆ ನಂತರ ಚಾಸಾ-1 ರವರನ್ನು ಚೆನ್ನಾಗಿ ನೋಡಿಕೊಂಡಿದ್ದು, ಆಕೆ ಹೆಣ್ಣು ಮಗುವಿಗೆ ಜನ್ಮ ನೀಡಿದ ಬಳಿಕ ಹೆಣ್ಣು ಮಗುವಾಗಿದೆ ಎಂದು ಆರೋಪಿತರು ಆಕೆಗೆ ಹಿಂಸೆ ಕೊಟ್ಟಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಯೊಂದಿಗೆ ಬಾಳ್ವೆ ನಡೆಸಬೇಕಾದರೆ 2 ಲಕ್ಷ ರೂಪಾಯಿ ವರದಕ್ಷಿಣೆ ಹಣ ತರಬೇಕೆಂದು ಹಿಂಸೆ ಕೊಟ್ಟಿದ್ದು, ಚಾಸಾ-1 ಮನೆಗೆ ಬಂದು ಈ ವಿಷಯವನ್ನು ಹೇಳುತ್ತಿದ್ದರು ಎಂದರೆ ಸರಿ. ದಿಃ 15-01-2013 ರಂದು ಸಂಜೆ 4

ಗಂಟೆಗೆ ಚಾಸಾ-1 ಮತ್ತು ಮಗುವನ್ನು ತವರು ಮನೆಗೆ ತಂದು ಬಿಟ್ಟಿದ್ದು, 2 ಲಕ್ಷ ಹೆಚ್ಚಿನ ವರದಕ್ಷಿಣೆ ಹಣ ಕೊಡದಿದ್ದಲ್ಲಿ ಕೊಲ್ಲುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಚಾಸಾ-1 ರವರಿಗೆ 2 ನೇ ಆರೋಪಿಯು ವರದಕ್ಷಿಣೆ ಕೊಡದಿದ್ದಲ್ಲಿ ಮಗುವಿನೊಂದಿಗೆ ತವರು ಮನೆಯಲ್ಲಿ ಇರಬೇಕು, ನಿನ್ನ ಗಂಡನನ್ನು ಕಳುಹಿಸುವುದಿಲ್ಲ, ನೀನು ಸತ್ತರೂ ಬರುವುದಿಲ್ಲ, ಗಂಡನೊಂದಿಗೆ ಬಾಳ್ವೆ ಮಾಡಲು ಬಿಡುವುದಿಲ್ಲ, ಪೊಲೀಸ್ ಠಾಣೆಯಲ್ಲಿ ಕೇಸು ಮಾಡಿದರೆ ನಿನ್ನನ್ನು ಮತ್ತು ನಿನ್ನ ಮಗುವನ್ನು ಸಾಯಿಸುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ . ನಂತರ ಚಾಸಾ-1 ಕೆಲವು ದಿನಗಳ ಬಳಿಕ ಮಗುವಿನೊಂದಿಗೆ ಗಂಡನ ಮನೆಗೆ ಹೋಗಿ ಗಂಡನೊಂದಿಗೆ ಜೀವನ ನಡೆಸಲು ಅವಕಾಶ ಕೊಡುವಂತೆ ಬೇಡಿಕೊಂಡರೂ 2 ಲಕ್ಷ ವರದಕ್ಷಿಣೆ ಹಣ ತರಬೇಕೆಂದು ಮನೆಯ ಒಳಗೆ ಹೋಗಲು ಬಿಡದೆ ವಾಪಸ್ಸು ಕಳುಹಿಸಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ಮಗುವಿನೊಂದಿಗೆ ತವರು ಮನೆಯಲ್ಲಿ ಇದ್ದರೂ ಆರೋಪಿತರು ಆಗಾಗ ಬಂದು ವರದಕ್ಷಿಣೆ ಹಣಕ್ಕಾಗಿ ಆಕೆಗೆ ಹಿಂಸೆ ನೀಡಿರುತ್ತಾರೆ ಎಂದರೆ ಸರಿ.

ಚಾಸಾ-1 ವಿಜಯ ಸ್ತ್ರೀ ಶಕ್ತಿ ಮೂಲಕ ದೂರನ್ನು ನೀಡಿದ್ದು, ಆಗ ಅವಳನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಆರೋಪಿತರು ತಿಳಿಸಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ ಚಾಸಾ-1 ರವರನ್ನು ಮುಂಬೈಗೆ ಬರುವಂತೆ ತಿಳಿಸಿದ್ದು, ಆಕೆ ಹೋದಾಗ ಸರಿಯಾಗಿ ನೋಡಿಕೊಳ್ಳದೆ ವಾಪಸ್ಸು ಊರಿಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಆರೋಪಿತರು ಚಾಸಾ-1 ಮತ್ತು ಅವರ ಮಗುವನ್ನು ಕರೆದುಕೊಂಡು ಹೋಗುವುದಾಗಿ ಒಪ್ಪಿಕೊಂಡಿದ್ದು, ನಂತರ ಪುನಃ ವರದಕ್ಷಿಣೆಗಾಗಿ ಮಾನಸಿಕವಾಗಿ ಹಿಂಸೆ ನೀಡಿ ಮನೆಯಿಂದ ಹೊರಗೆ ಹಾಕಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಈ ಮೇಲೆ ಹೇಳಿದಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ</u>**

ಮದುವೆಯು ತ್ರಾಸಿಯ ಅಣ್ಣಪ್ಪಯ್ಯ ಸಭಾ ಭವನದಲ್ಲಿ ನಡೆದಿರುತ್ತದೆ ಎಂದರೆ ಸರಿ. ಮದುವೆಗೆ 2 ಕಡೆಯಿಂದ ಜನರು ಬಂದಿದ್ದರು. ಸುಮಾರು 2 ಸಾವಿರ ಜನ ಬಂದಿರುತ್ತಾರೆ. ಮದುವೆಗೆ ಭಟ್ಟರು, ವಾದ್ಯದವರು ಬಂದಿದ್ದರು, ಸಭಾ ಭವನವನ್ನು ಅಲಂಕರಿಸಿದ್ದರು. ಮದುವೆಯ ಖರ್ಚುಗಳನ್ನು 2 ಕಡೆಯವರೂ ಹಂಚಿಕೊಂಡಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ ತೀರಿಕೊಂಡು 6 ವರ್ಷಗಳಾಗಿರುತ್ತದೆ. 1 ನೇ ಆರೋಪಿಗೆ ಬ್ರೈನ್ ಟ್ಯೂಮರ್ ಎಂದು ಹೇಳಿರುತ್ತಾರೆ. 1 ನೇ ಆರೋಪಿ ಸಾಯುವ ಮೊದಲು 3 ವರ್ಷ ಮೆಡಿಸಿನ್

ತೆಗೆದುಕೊಳ್ಳುತ್ತಿದ್ದರು. 2 ನೇ ಆರೋಪಿಗೆ 4 ಜನ ಹೆಣ್ಣು ಮಕ್ಕಳು ಇದ್ದಾರೆ, ಗಂಡ ಇದ್ದಾರೋ ಇಲ್ಲವೋ ಗೊತ್ತಿಲ್ಲ.

ಚಾಸಾ-1 ರವರಿಗೆ ಮದುವೆಯಾಗುವ ಸಮಯದಲ್ಲಿ 1 ನೇ ಆರೋಪಿ ಮುಂಬೈಯಲ್ಲಿ ಕೆಲಸದಲ್ಲಿ ಇದ್ದರು. ಮುಂಬೈಯಲ್ಲಿ ಯಾವ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು, ಅವರು ಎಲ್ಲಿ ವಾಸವಾಗಿದ್ದರು ಎಂದು ನಾನು ನೋಡಿರುವುದಿಲ್ಲ. ಚಾಸಾ-1 ರವರು ಮುಂಬೈಯಲ್ಲಿ 1 ನೇ ಆರೋಪಿ ಜೊತೆ ವಾಸವಾಗಿದ್ದಾಗ ನಾನು ಹೋಗಿರುವುದಿಲ್ಲ. ಚಾಸಾ-4 ರವರು ವರದಕ್ಷಿಣೆ ಹಣ ನೀಡಿರುತ್ತಾರೆ. ಯಾವ ದಿನಾಂಕದಂದು ಹಣ ನೀಡಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ.

1 ನೇ ಆರೋಪಿ ಮತ್ತು ಚಾಸಾ-1 ರವರು ಮುಂಬೈಯಲ್ಲಿದ್ದಾಗ 2 ನೇ ಆರೋಪಿ ತನ್ನ ಮಕ್ಕಳು ಮತ್ತು ತಂಗಿಯೊಂದಿಗೆ ತ್ರಾಸಿಯಲ್ಲಿ ವಾಸವಾಗಿದ್ದರು. 2 ನೇ ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. 40 ಸಾವಿರ ನಗದು ಹಣವನ್ನು ನನ್ನ ಮತ್ತು ನನ್ನ ಮಾವನ ಸಮಕ್ಷಮ ಚಾಸಾ-4 ರವರು 2 ನೇ ಆರೋಪಿಗೆ ಅವರ ಮನೆಗೆ ಹೋಗಿ ಕೊಟ್ಟಿರುತ್ತೇವೆ. ಉಳಿದ ಹಣವನ್ನು ಚೆಕ್ಕು ಮುಖಾಂತರ ಗಂಗೊಳ್ಳಿ ಕೆನರಾ ಬ್ಯಾಂಕಿನಲ್ಲಿ ಕೊಟ್ಟಿರುತ್ತೇವೆ. ಎಲ್ಲಾ ಹಣವನ್ನು ಒಂದೇ ಬಾರಿ ಕೊಟ್ಟಿಲ್ಲ, ನಗದು ಹಣ 40 ಸಾವಿರ ಹಣ ಕೊಟ್ಟಿರುತ್ತೇವೆ. ಉಳಿದ ಹಣ ಚೆಕ್ ಮೂಲಕ ಕೊಟ್ಟಿರುತ್ತೇವೆ. ಸದ್ರಿ ಹಣವನ್ನು ಜಾಗ ಮಾರಿ ಕೊಟ್ಟಿರುತ್ತೇವೆ, ಆ ಬಗ್ಗೆ ದಾಖಲೆ ಇರುತ್ತದೆ.

ನಗದು ಮತ್ತು ಚೆಕ್ಕು ಮೂಲಕ ನೀಡಿದ ಹಣವನ್ನು ಯಾವ ದಿನ ನೀಡಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ವರದಕ್ಷಿಣೆ ಹಣವನ್ನು ಬೇರೆ ಬೇರೆ ದಿನ ನೀಡಿರುತ್ತೇವೆ. 1 ತಿಂಗಳ ಅಂತರದಲ್ಲಿ ಎಲ್ಲಾ ಹಣವನ್ನು ನೀಡಿರುತ್ತೇವೆ. ಮಾರಾಟ ಮಾಡಿದ ಜಾಗದ ಸರ್ವೆ ನಂಬ್ರ, ವಿಸ್ತೀರ್ಣ ಗೊತ್ತಿಲ್ಲ. ಆ ಜಾಗ ಚಾಸಾ-4 ರವರ ಸ್ವಯಾರ್ಜಿತ ಆಸ್ತಿ. ನಾನು 2 ನೇ ಆರೋಪಿಯ ಮನೆಗೆ ಹೋಗಿರುವುದಿಲ್ಲ. ನನ್ನ ಗಂಡನ ಮನೆ ಹೊಸನಗರದಲ್ಲಿ ಇರುತ್ತದೆ, ನನಗೆ ಇಬ್ಬರು ಮಕ್ಕಳು. ನನ್ನ ಗಂಡ ಮೇಸ್ತ್ರೀ ಕೆಲಸ ಮಾಡುತ್ತಾರೆ. ಚಾಸಾ-1 ರವರನ್ನು ಮನೆಯಿಂದ ಹೊರಗೆ ಹಾಕಿದ್ದು ಅವರು ನಮ್ಮ ಮನೆಗೆ ಬಂದಾಗ ವಿಷಯ ಗೊತ್ತಾಗಿರುತ್ತದೆ.

ಚಾಸಾ-1 ರವರನ್ನು ಮನೆಯಿಂದ ಹೊರ ಹಾಕಿದಾಗ ದೂರನ್ನು ಕೊಟ್ಟಿರುತ್ತಾರೆ, ಯಾವಾಗ ದೂರು ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಸದ್ರಿ ದೂರನ್ನು 1 ಮತ್ತು 2 ನೇ ಆರೋಪಿ, ಸೀತಾ, ಗೌರಿರವರ ವಿರುದ್ಧ ನೀಡಿರುತ್ತಾರೆ. ದೂರು ಕೊಡುವಾಗ ನಾನು ಹೋಗಿದ್ದೆ. ಅಷ್ಟೂ ಜನರು ನನ್ನ ಅಕ್ಕನಿಗೆ ಹಿಂಸೆ ನೀಡಿರುತ್ತಾರೆ. ಸದ್ರಿ ದೂರಿನ ಪ್ರತಿ ನನ್ನ ಅಕ್ಕನ ಬಳಿ ಇದೆ. 2 ನೇ ಆರೋಪಿ ಚಾಸಾ-1 ರವರ ಸುದ್ದಿಗೆ ಹೋಗುವುದಿಲ್ಲ ಎಂದು ಪೊಲೀಸರ ಮುಂದೆ ಬರೆದುಕೊಟ್ಟಿದ್ದರು. ಸದ್ರಿ ಮುಚ್ಚಳಿಕೆ ಚಾಸಾ-1 ರವರ ಬಳಿ ಇರುತ್ತದೆ.

ನಂತರ ಚಾಸಾ-1 ರವರನ್ನು ಮುಂಬೈಗೆ ಕಳುಹಿಸಿಕೊಟ್ಟಿರುತ್ತೇವೆ. ಮೊದಲಿನ ದೂರು ನೀಡಿದ 1 ವರ್ಷದ ನಂತರ 2 ನೇ ದೂರನ್ನು ನೀಡಿರುತ್ತಾರೆ.

1 ನೇ ಆರೋಪಿಗೆ ಉಡುಪಿಯ ಆದರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಟ್ಟಿರುವುದಾಗಿ ಹೇಳಿರುತ್ತಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ತುಂಬಾ ಹಣ ಖರ್ಚಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ 1 ನೇ ಆರೋಪಿಯನ್ನು 2 ನೇ ಆರೋಪಿಯು ನೋಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿಯ ಸಾವಿನ ನಂತರ ಚಾಸಾ-1 ರವರಿಗೆ ಪರಿಹಾರ ಬಂದಿದೆ ಎಂದರೆ ಸರಿ. ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ, ನನ್ನ ಅಕ್ಕ ನೀಡಿರುತ್ತಾರೆ. ಮುಂಬೈಯಲ್ಲಿ ಚಾಸಾ-1 ಮತ್ತು 1 ನೇ ಆರೋಪಿ 1 ವರ್ಷ ಸಂಸಾರ ಮಾಡಿರುತ್ತಾರೆ. 1 ನೇ ಆರೋಪಿಗೆ ಯಾವುದೇ ದುಶ್ಚಟ ಇರಲಿಲ್ಲ ಎಂದರೆ ಸರಿ. ಮುಂಬೈಯಲ್ಲಿ 1 ನೇ ಆರೋಪಿ ವಾಸವಾಗಿದ್ದ ಮನೆಯ ಆಸುಪಾಸು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ.

2 ನೇ ಆರೋಪಿ ಚಾಸಾ-1 ರವರಿಗೆ ಯಾವುದೇ ತೊಂದರೆ ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. 2 ನೇ ಆರೋಪಿ ಯಾವುದೇ ವರದಕ್ಷಿಣೆ ಕೇಳಿಲ್ಲ ನಾವು ಯಾವುದೇ ವರದಕ್ಷಿಣೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ-1 ರವರಿಗೆ ಹೊಡೆದಾಗ ನಾನು ಇರಲಿಲ್ಲ, ಗಂಗೊಳ್ಳಿಯ ಮನೆಯಲ್ಲಿ ಇದ್ದೆ. ಚಾಸಾ-1 ರವರಿಗೆ 2 ನೇ ಆರೋಪಿ ಹೊಡೆದ ಬಗ್ಗೆ ಪ್ರತ್ಯೇಕ ದೂರನ್ನು ನೀಡಿರುತ್ತಾರೆ. ಸುಮಾರು 4 ಜನರ ಎದುರು ಅವರ ಮನೆಯಲ್ಲಿ 2 ನೇ ಆರೋಪಿ ಚಾಸಾ-1 ರವರಿಗೆ ಹೊಡೆದಿರುತ್ತಾರೆ. ಚಾಸಾ-1 ರವರು ಆಸ್ಪತ್ರೆಗೆ ಹೋಗಿದ್ದಾರಾ ಎಂದು ನನಗೆ ಗೊತ್ತಿಲ್ಲ.

ನಾನು 2 ನೇ ಆರೋಪಿಯ ವಿರುದ್ಧ ಮಾಡಿದ ಆರೋಪಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ನಾನು ನನ್ನ ಅಕ್ಕನ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆಂದರೆ ಸರಿಯಲ್ಲ. 2 ನೇ ಆರೋಪಿಯಿಂದ ನನ್ನ ಅಕ್ಕನಿಗೆ ಯಾವುದೇ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**